# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,

## ಟಿ. ನರಸೀಪುರ.

## ಸಿ. ಸಿ ನಂ. 2053/2025

ಪಿರ್ಯಾದಿದಾರರು : ಸರ್ಕಾರ ಪರವಾಗಿ ಬನ್ನೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿ : **1. ನಂಜು @ ನಂಜುಂಡ,**
ಬಿನ್ ಲೇಟ್ ನಂಜೇಗೌಡ, 69 ವರ್ಷ,

**2. ಚೌಡೇಗೌಡ @ ಚೌಡಯ್ಯ,**
ಬಿನ್ ಲೇಟ್ ಬಸವೇಗೌಡ, 71 ವರ್ಷ,

**3. ಬಸವರಾಜು @ ಪಾಪು,**
ಬಿನ್. ಚೌಡೇಗೌಡ, 39 ವರ್ಷ,
ಎಲ್ಲರ ವಾಸಃ ಚಿಕ್ಕಕಲ್ಲುಣಿ ಗ್ರಾಮ, ಸೋಸಲೆ ಹೋಬಳಿ,
ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀ ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತೇನೆ.**

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ

ದಿನಾಂಕ 24.01.2024 ರಂದು ಮಧ್ಯಾಹ್ನ 1.00 ಗಂಟೆಗೆ ಬನ್ನೂರು ಪೋಲೀಸ್ ಠಾಣಾ ವ್ಯಾಪ್ತಿಯ ಕಲ್ಲುಣಿ ಗ್ರಾಮದಲ್ಲಿ ಸ.ನಂ.184/6 ರಲ್ಲಿ 0.18 ಗುಂಟೆ ಜಮೀನಿನಲ್ಲಿ ಚಾಸಾ-1 ರವರು ಅಡಕೆ ಬೆಳೆಯನ್ನು ಬೆಳೆದು 6 ವರ್ಷಗಳಾಗಿದ್ದು, 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಸದರಿ ಅಡಿಕೆ ತೋಟಕ್ಕೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.447 ಸಹವಾಚದ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸದರಿ ಅಡಿಕೆ ತೋಟಕ್ಕೆ ಅಕ್ರಮ ಪ್ರವೇಶ ಮಾಡಿ ಬೆಂಕಿ ಹಾಕಿದ್ದು, ಇದರ ಪರಿಣಾಮ ಚಾಸಾ–1ರವರ ಸ.ನಂ.270/11ರಲ್ಲಿ ಹಾಕಿದ್ದ ಅಡಿಕೆ ತೋಟ ಸುಟ್ಟು ಭಸ್ಮವಾಗಿ ಸುಮಾರು 1½ ಲಕ್ಷ ರೂಪಾಯಿ ನಷ್ಟವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.435 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–1ರವರ ಅಡಿಕೆ ತೋಟಕ್ಕೆ ಬೆಂಕಿ ಹಾಕಿದ್ದನ್ನು ನೋಡಿದ ಚಾಸಾ–1ರವರು ನಿಮ್ಮನ್ನು ಉದ್ದೇಶಿಸಿ, ಏಕೆ ಈ ರೀತಿ ಬೆಂಕಿ ಹಾಕಿದ್ದೀರಿ ಎಂದು ಕೇಳಿದ್ದಕ್ಕೆ, ಆರೋಪಿತರಾದ ನೀವು ಚಾಸಾ–1ರವರನ್ನು ಕುರಿತು ಇದನ್ನು ಕೇಳಲು ನೀನು ಯಾರು ಬೋಳಿ ಮಗನೇ, ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚದ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3 ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–1ರವರನ್ನು ಉದ್ದೇಶಿಸಿ ನಿನ್ನನ್ನು ಇದೆ ಬೆಂಕಿಯಲ್ಲಿ ಹಾಕಿ ಸುಟ್ಟು ಹಾಕುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ಅಪರಾಧಗಳಿಗಾಗಿ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

ದಿನಾಂಕಃ **17.06.2026.**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.**
**ಟಿ. ನರಸೀಪುರ.**

## ಆರೋಪಿತರ ಹೇಳಿಕೆ

ಪ್ರಶ್ನೆ– 1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

ಪ್ರಶ್ನೆ–2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ. ಎಫ್.ಸಿ., ಟಿ.ನರಸೀಪುರ.**

**ಆರೋಪಿತರ ಸಹಿ**